# ಪವಿತ್ರ ಯೇಸುಬಾಲರಿಗೆ ಮನವಿಮಾಲೆ

ಸ್ವಾಮಿ ದಯೆ ತೋರಿ. ಸ್ವಾಮಿ ದಯೆ ತೋರಿ

ಪ್ರಭೂ ದಯೆ ತೋರಿ. ಪ್ರಭೂ ದಯೆ ತೋರಿ

ಸ್ವಾಮಿ ದಯೆ ತೋರಿ. ಸ್ವಾಮಿ ದಯೆ ತೋರಿ

ಕ್ರಿಸ್ತರೇ ನಮ್ಮನ್ನು ಆಲಿಸಿರಿ. ಕ್ರಿಸ್ತರೇ ನಮ್ಮ ಪ್ರಾರ್ಥನೆಯನ್ನು ದಯೆಯಿಂದ ಆಲಿಸಿರಿ

ಪರಲೋಕದ ಪಿತ ದೇವರೇ. ನಮಗೆ ದಯೆ ತೋರಿ

ಲೋಕ ರಕ್ಷಕರಾದ ಸುತ ದೇವರೇ. ನಮಗೆ ದಯೆ ತೋರಿ

ಪವಿತ್ರಾತ್ಮ ದೇವರೇ. ನಮಗೆ ದಯೆ ತೋರಿ

ಅದ್ಭುತಶಾಲಿಯಾದ ಯೇಸುಬಾಲರೇ. ನಮಗೆ ದಯೆ ತೋರಿ

ಆಶ್ಚರ್ಯಕರವಾಗಿ ಸರ್ವಶಕ್ತಿಯನ್ನು ಪ್ರದರ್ಶಿಸುವ ಯೇಸು ಬಾಲರೇ. ನಮಗೆ ದಯೆ ತೋರಿ

ನಮ್ಮ ಹೃನ್ಮನಗಳಲ್ಲಿರುವುದನ್ನು ಅರಿತು ನಮ್ಮಲ್ಲಿ ರಾಜ್ಯಭಾರ ನಡೆಸುವಂತಹ ಯೇಸುಬಾಲರೇ. ನಮಗೆ ದಯೆ ತೋರಿ

ನಮಗೆ ಸದಾ ನೆರವಾಗುವಂಥ ಪ್ರೀತಿಯುಳ್ಳ ಯೇಸುಬಾಲರೇ. ನಮಗೆ ದಯೆ ತೋರಿ

ನಾವು ಅಂತಿಮ ಗುರಿಯನ್ನು ಮುಟ್ಟಲು ನಮ್ಮನ್ನು ಸದಾ ಪರಾಂಬರಿಸುವ ಯೇಸುಬಾಲರೇ. ನಮಗೆ ದಯೆ ತೋರಿ

ನಮ್ಮ ಹೃದಯದ ಅಂಧಕಾರವನ್ನು ಸತ್ಯದಿಂದ ಬೆಳಗಿಸುವಂತಹ ಯೇಸುಬಾಲರೇ. ನಮಗೆ ದಯೆ ತೋರಿ

ಬಡವರನ್ನು ಸಕಲ ಐಶ್ವರ್ಯದಿಂದ ಧಾರಾಳವಾಗಿ ತುಂಬಿಸುವ ಯೇಸುಬಾಲರೇ. ನಮಗೆ ದಯೆ ತೋರಿ

ನೊಂದವರನ್ನು ಸ್ನೇಹದಿಂದ ಸಾಂತ್ವನಪಡಿಸುವ ಯೇಸುಬಾಲರೇ. ನಮಗೆ ದಯೆ ತೋರಿ

ನಮ್ಮ ಪಾಪಗಳನ್ನು ಕ್ಷಮಿಸುವ ದಯಾಭರಿತ ಯೇಸುಬಾಲರೇ. ನಮಗೆ ದಯೆ ತೋರಿ

ಇಡೀ ವಿಶ್ವವನ್ನು ನಿಮ್ಮ ಮಹಿಮೆಯಿಂದ ತುಂಬಿರುವ ಯೇಸುಬಾಲರೇ. ನಮಗೆ ದಯೆ ತೋರಿ

ದಯಾಪರರಾಗಿದ್ದು. ನಮ್ಮನ್ನು ಕ್ಷಮಿಸಿರಿ ಸ್ವಾಮಿ

ದಯಾಪರರಾಗಿದ್ದು. ನಮ್ಮ ಪ್ರಾರ್ಥನೆಯನ್ನು ಆಲಿಸಿರಿ ಸ್ವಾಮಿ

ಸಕಲ ಕೇಡುಗಳಿಂದ. ನಮ್ಮನ್ನು ರಕ್ಷಿಸಿರಿ ಯೇಸುವೇ

ಸಕಲ ಪಾಪಗಳಿಂದ. ನಮ್ಮನ್ನು ರಕ್ಷಿಸಿರಿ ಯೇಸುವೇ

-ನಮ್ಮನ್ನು ರಕ್ಷಿಸಿರಿ ಯೇಸುವೇ. ನಮ್ಮನ್ನು ರಕ್ಷಿಸಿರಿ ಯೇಸುವೇ

ನಿಮ್ಮ ಮಿತಿಯಿಲ್ಲದ ಒಳಿತಿನಲ್ಲಿ ಅಪನಂಬಿಕೆ ಪಡದಂತೆ. ನಮ್ಮನ್ನು ರಕ್ಷಿಸಿರಿ ಯೇಸುವೇ

ಅದ್ಭುತಗಳನ್ನು ಮಾಡುವ ನಿಮ್ಮ ಶಕ್ತಿಯಲ್ಲಿ ಅಪನಂಬಿಕೆ ಪಡದಂತೆ. ನಮ್ಮನ್ನು ರಕ್ಷಿಸಿರಿ ಯೇಸುವೇ

ನಿಮ್ಮ ಭಕ್ತಿಯಲ್ಲಿ ತತ್ತಳಿಸದಂತೆ. ನಮ್ಮನ್ನು ರಕ್ಷಿಸಿರಿ ಯೇಸುವೇ

ದುಃಖ, ನೋವಿನ ಸಂದರ್ಭಗಳಲ್ಲಿ ನಾವು ಸಿಲುಕದಂತೆ. ನಮ್ಮನ್ನು ರಕ್ಷಿಸಿರಿ ಯೇಸುವೇ

ನಿಮ್ಮ ಮಾತೆ ಮರಿಯಮ್ಮನವರ ಹಾಗೂ ನಿಮ್ಮ ಪೋಷಕ ತಂದೆ ಜೋಸೆಫರ ಬಿನ್ನಹಗಳ ಮುಖಾಂತರ. ಪ್ರಾರ್ಥಿಸುವ ನಮ್ಮನ್ನು ಆಲೈಸಿರಿ

ನಮ್ಮನ್ನು ಕ್ಷಮಿಸಬೇಕೆಂದು. ಪ್ರಾರ್ಥಿಸುವ ನಮ್ಮನ್ನು ಆಲ್ಯೆಸಿರಿ

ನಿಮ್ಮ ಪವಿತ್ರ ಬಾಲ್ಯದ ಬಗ್ಗೆ ಪ್ರೀತಿ ವಿಶ್ವಾಸವನ್ನು ನಮ್ಮಲ್ಲಿ ಕಾದಿರಿಸಿ ಅಧಿಕರಿಸಬೇಕೆಂದು. ಪ್ರಾರ್ಥಿಸುವ ನಮ್ಮನ್ನು ಆಲ್ಯೆಸಿರಿ

ನಿಮ್ಮ ಅದ್ಭುತಕರ ಹಸ್ತವನ್ನು ನಮ್ಮಿಂದ ಹಿಂತೆಗೆಯಬೇಡಿರೆಂದು. ಪ್ರಾರ್ಥಿಸುವ ನಮ್ಮನ್ನು ಆಲ್ಯೆಸಿರಿ

ನಿಮ್ಮ ಲೆಕ್ಕವಿಲ್ಲದ ಕೊಡುಗೆಗಳನ್ನು ನಾವು ಸದಾ ಜ್ಞಾಪಿಸಿ-ಕೊಳ್ಳುವಂತೆ ಮಾಡಿರೆಂದು. ಪ್ರಾರ್ಥಿಸುವ ನಮ್ಮನ್ನು ಆಲ್ಯೆಸಿರಿ

ನಿಮ್ಮ ಪವಿತ್ರ ಹೃದಯವನ್ನು ಹೆಚ್ಚಾಗಿ ಪ್ರೀತಿಸಲು ನಮ್ಮಲ್ಲಿ ನಿಮ್ಮ ಪ್ರೇಮಾಗ್ನಿಯನ್ನು ಉರಿಸಿರೆಂದು. ಪ್ರಾರ್ಥಿಸುವ ನಮ್ಮನ್ನು ಆಲ್ಯೆಸಿರಿ

ನಿಮ್ಮಲ್ಲಿ ನಂಬಿಕೆಯಿಟ್ಟು ಪ್ರಾರ್ಥಿಸುವವರೆಲ್ಲರನ್ನು ದಯೆಯಿಂದ ಆಲಿಸಿರೆಂದು. ಪ್ರಾರ್ಥಿಸುವ ನಮ್ಮನ್ನು ಆಲ್ಯೆಸಿರಿ

ನಮ್ಮ ನಾಡಿಗೆ ಶಾಂತಿಯನ್ನು ಪಾಲಿಸಿರೆಂದು. ಪ್ರಾರ್ಥಿಸುವ ನಮ್ಮನ್ನು ಆಲ್ಯೆಸಿರಿ

ಬರಲಿರುವ ಕೇಡುಗಳಿಂದ ನಮ್ಮನ್ನು ಕಾಪಾಡಿರೆಂದು. ಪ್ರಾರ್ಥಿಸುವ ನಮ್ಮನ್ನು ಆಲ್ಯೆಸಿರಿ

ಧಾರಾಳ ಮನಸ್ಸಿನಿಂದ ಸೇವೆ ಸಲ್ಲಿಸಿದವರಿಗೆ ನಿತ್ಯಜೀವನವನ್ನು ಕರುಣಿಸಿರೆಂದು. ಪ್ರಾರ್ಥಿಸುವ ನಮ್ಮನ್ನು ಆಲ್ಯೆಸಿರಿ

ಅಂತಿಮ ತೀರ್ಪಿನ ಸಮಯದಲ್ಲಿ ನಮಗೆ ದಯಾಭರಿತ ತೀರ್ಪನ್ನು ನೀಡಿರೆಂದು. ಪ್ರಾರ್ಥಿಸುವ ನಮ್ಮನ್ನು ಆಲ್ಯೆಸಿರಿ

ನಿಮ್ಮ ಅದ್ಭುತಕರ ಪ್ರತಿಮೆಯು ನಮ್ಮೆಲ್ಲರಿಗೆ ಉಪಶಮನ-ವನ್ನೀಯುವ ಆಶ್ರಯವಾಗಿರಲೆಂದು. ಪ್ರಾರ್ಥಿಸುವ ನಮ್ಮನ್ನು ಆಲ್ಯೆಸಿರಿ

ದೇವಸುತ, ಮರಿಯಮ್ಮನವರ ಪುತ್ರನಾದ ಯೇಸುವೇ. ಪ್ರಾರ್ಥಿಸುವ ನಮ್ಮನ್ನು ಆಲ್ಯೆಸಿರಿ

ಲೋಕದ ಪಾಪಗಳನ್ನು ಪರಿಹರಿಸುವ ದೇವರ ಕುರಿಮರಿಯೇ. ನಮ್ಮ ಪಾಪಗಳನ್ನು ಕ್ಷಮಿಸಿರಿ ಯೇಸುವೇ

ಲೋಕದ ಪಾಪಗಳನ್ನು ಪರಿಹರಿಸುವ ದೇವರ ಕುರಿಮರಿಯೆ. ನಮ್ಮ ಪ್ರಾರ್ಥನೆಯನ್ನು ಆಲೈಸಿರಿ ಯೇಸುವೇ

ಲೋಕದ ಪಾಪಗಳನ್ನು ಪರಿಹರಿಸುವ ದೇವರ ಕುರಿಮರಿಯೇ. ನಮಗೆ ದಯೆತೋರಿ ಯೇಸುವೇ

ಯೇಸುವೇ, ನಮ್ಮನ್ನು ಆಲಿಸಿರಿ. ಯೇಸುವೇ, ನಮ್ಮನ್ನು ದಯೆಯಿಂದ ಆಲಿಸಿರಿ

**ಪ್ರಾರ್ಥಿಸೋಣ:**

ಅದ್ಭುತಶಾಲಿಯಾದ ಬಾಲಯೇಸುವೇ, ನಾವು ನಿಮ್ಮ ಪ್ರತಿಮೆಯ ಮುಂದೆ ಸಾಷ್ಟಾಂಗವಾಗಿ ಅಡ್ಡಬಿದ್ದು, ನಿಮ್ಮ ಸಹಾಯವನ್ನು ಯಾಚಿಸುತ್ತೇವೆ. ನೊಂದಿರುವ ನಮ್ಮ ಹೃನ್ಮನಗಳ ಮೇಲೆ ನಿಮ್ಮ ಕೃಪಾಕಟಾಕ್ಷವನ್ನು ಇರಿಸಿರಿ. ಪ್ರೀತಿಮಯ ಹಾಗೂ ಕರುಣಾಭರಿತ ಹೃದಯವುಳ್ಳ ನೀವು ನಮ್ಮ ದೀನ ಪ್ರಾರ್ಥನೆಗಳೆಂದ ಮನಕರಗಿ ನಾವು ಭಕ್ತಿಯಿಂದ ಕೋರುವ ವರಗಳನ್ನು ದಯಪಾಲಿಸಿರಿ.

**(ವೈಯಕ್ತಿಕ ಕೋರಿಕೆಗಳನ್ನು ಇಲ್ಲಿ ನಿವೇದಿಸಬಹುದು)**

ನಮಗೆ ಉಂಟಾಗಿರುವ ಅಧೈರ್ಯವನ್ನು ತೊಲಗಿಸಿರಿ, ನಮಗೆ ಬಂದೊದಗಿರುವ ಕಷ್ಟ ಕಾರ್ಪಣ್ಯಗಳನ್ನು ದೂರಮಾಡಿರಿ. ನಿಮ್ಮ ಪವಿತ್ರ ಬಾಲ್ಯದ ನಿಮಿತ್ತ ನಮ್ಮ ಪ್ರಾರ್ಥನೆಗಳನ್ನು ಆಲಿಸಿ ಉಪಕಾರವನ್ನೂ ಉಪಶಮನವನ್ನೂ ನೀಡಿರಿ. ನಿಮ್ಮ ಸಹಾಯವನ್ನು ಪಡೆದು ಧನ್ಯರಾದ ನಾವು ಪಿತನೊಂದಿಗೂ ಪವಿತ್ರಾತ್ಮರೊಂದಿಗೂ ಸದಾ ಕಾಲಕ್ಕೂ ನಿಮ್ಮನ್ನು ಸ್ತುತಿಸುವೆವು. ಆಮೆನ್.